ಅಥವಾ ಫ್ಲೈ-ಓವರ್ ನಿರ್ಮಾಣ ಮಾಡುವ ಅವಶ್ಯಕತೆ ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ) ಹಾಗಿದ್ದಲ್ಲಿ ಪ್ರತಿದಿನ ಸಹಸ್ರಾರು ಜನರಿಗೆ, ವಾಹನಗಳಿಗೆ ಈ ರೈಲ್ವೆ ಗೇಟಿನಿಂದಾಗಿ ತೊಂದರೆ ಆಗುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು):

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಇನ್ನೂ ಪರಿಶೀಲನೆ ಹಂತದಲ್ಲಿದೆ.

ಇ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಸುಳ್ಯದಲ್ಲಿ ಅರಣ್ಯ ಇಲಾಖೆಗೆ ಸೇರಿದ ಸ್ಥಳದಲ್ಲಿ ಅನಧಿಕೃತ ಕೃತಾವಳಿ

2090(2722)

ಶ್ರೀ ಎಸ್. ಅಂಗಾರ(ಸುಳ್ಯ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ/

ಅ) ಸುಳ್ಯ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಒಳಗೆ ಅರಣ್ಯ ಇಲಾಖೆಗೆ ಸಂಬಂಧಿಸಿದ ಸ್ಥಳದಲ್ಲಿ ಕಳೆದ ಹತ್ತು ವರ್ಷಗಳಿಂದ ಎಷ್ಟು ಕುಟುಂಬಗಳು ಅನಧಿಕೃತ ಸ್ವಾಧೀನಪಡಿಸಿ ಕೃತಾವಳಿ ಮಾಡಿಕೊಂಡು ವಾಸಿಸುತ್ತಿದ್ದಾರೆ? (ಗ್ರಾಮವಾರು ಮಾಹಿತಿ ನೀಡುವುದು)

ಆ) ಅರಣ್ಯ ಇಲಾಖೆಗೆ ಸಂಬಂಧಿಸಿದ ಸ್ಥಳದಲ್ಲಿ ಕಳೆದ ಹತ್ತು ವರ್ಷಗಳಿಂದ ಅನಧಿಕೃತವಾಗಿ ಸ್ವಾಧೀನಪಡಿಸಿ ಕೃತಾವಳಿ ಮಾಡಿಕೊಂಡು ಬರುತ್ತಿರುವ ಕುಟುಂಬಗಳನ್ನು ಸಕ್ರಮಗೊಳಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಶ್ರೀ ಕೆ.ಎಚ್. ರಂಗನಾಥ್(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಕಳೆದ ಹತ್ತು ವರ್ಷಗಳಿಂದ ಸುಳ್ಯ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಒಳಗೆ ಅರಣ್ಯ ಇಲಾಖೆಗೆ ಸಂಬಂಧಿಸಿದ ಸ್ಥಳದಲ್ಲಿ ಅನಧಿಕೃತವಾಗಿ ಸ್ವಾಧೀನಪಡಿಸಿ ಕೃತಾವಳಿ ಮಾಡಿಕೊಂಡು ಬರುತ್ತಿರುವ ಕುಟುಂಬಗಳ ಗ್ರಾಮವಾರು ವಿವರ ಈ ಕೆಳಗಿನಂತಿದೆ.

ವಲಯ	ಗ್ರಾಮ	ಕುಟುಂಬ	ವಿಸ್ತೀರ್ಣ (ಹೆ.ಗಳಲ್ಲಿ)
ಸುಳ್ಯ	ದೇವಚಳ್ಳ	12	3.94
	ನೆಲ್ಲೂರು		
	ಕೆಮ್ರಾಜ್	4	1.04
	ಅಲೆಟ್ಟಿ	2	0.80
	ತೋಡಿಕಾನ	4	2.80
	ಉಬರಡ್ಕ ಮತ್ತೂರು	6	1.80
		28	10.38
ಸುಬ್ರಹ್ಮಣ್ಯ	ನಾಲ್ಕೂರು	18	14.11
ಪಂಜ	-	-	-

ಆ) ಅರಣ್ಯ ಮತ್ತು ಕಂದಾಯ ಇಲಾಖೆಗಳ ಭೂಮಿಗಳು 1078ರ ನಂತರ ಅತಿಕ್ರಮಣಗಳನ್ನು ಪರಿಶೀಲಿಸಲು ಅರಣ್ಯ ಸಚಿವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪಸಮಿತಿಯನ್ನು ರಚಿಸಲಾಗಿದ್ದು ವಿಷಯವು ಸಮಿತಿಯ ಪರಿಶೀಲನೆಯಲ್ಲಿದೆ. ಅತಿಕ್ರಮಣವನ್ನು ಸಕ್ರಮಗೊಳಿಸುವ ನೀತಿ ಸರ್ಕಾರದಲ್ಲಿಲ್ಲ.

ಯುವ ವಕೀಲರಿಗೆ ಸ್ಟೈಫೆಂಡ್

2092(3000)

ಶ್ರೀ ಅಪ್ಪಚ್ಚು ರಂಜನ್ ಎಂ.ಪಿ.(ಸೋಮವಾರಪೇಟೆ): ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯುವ ವಕೀಲರಿಗೆ ಸ್ಟೈಫಂಡ್ ಎಲ್ಲಿಯವರೆಗೆ ನೀಡಲಾಗುತ್ತಿತ್ತು; ಇದನ್ನು ನಿಲ್ಲಿಸಲು ಕಾರಣವೇನು?